ಕಾಮಗಾರಿಗಳು ವಿಳಂಬವಾಗಿರುತ್ತವೆ. ಬಾಕಿ ಕಾಮಗಾರಿಗಳನ್ನು ಮಾರ್ಚ್–2016ರೊಳಗಾಗಿ ಪೂರ್ಣಗೊಳಿಸಲಾಗುವುದು.

2013–14ನೇ ಸಾಲಿನಲ್ಲಿ ಗಿರಿಜನ ಉಪ ಯೋಜನೆಯಡಿಯಲ್ಲಿ ಒಟ್ಟು 3 ಕಾಮಗಾರಿಗಳು ರೂ. 35.00 ಲಕ್ಷಗಳೀಗೆ ಅನುಮೋದನೆಯಾಗಿದ್ದು, ಎಲ್ಲ ಕಾಮಗಾರಿಗಳಿಗೆ ಬೊರವೆಲ್ ಕೊರೆಯಲಾಗಿದೆ. ಈ ಪೈಕಿ 1 ಕಾಮಗಾರಿಗೆ ಸೋಲಾರ ಪಂಪ ಅಳವಡಿಸಿ 1.62 ಹೇಕ್ಟೆರ್‌ಗಳ ಕ್ಷೇತ್ರದ 1 ಫಲಾನುಭವಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಬಾಕಿ 2 ಕಾಮಗಾರಿಗಳಿಗೆ ಸೌರಶಕ್ತಿ ಪಂಪ ಅಳವಡಿಸಲು ಶಕ್ಯತೆಯಿಲ್ಲದ ಕಾರಣ ಬದಲಾಗಿ ವಿದ್ಯುತ್ ಸಂಪರ್ಕ ಅಳವಡಿಸಲಾಗುತ್ತಿರುವುದರಿಂದ ಕಾಮಗಾರಿಗಳು ವಿಳಂಬವಾಗಿರುತ್ತವೆ. ಬಾಕಿ ಕಾಮಗಾರಿಗಳನ್ನು ಮಾರ್ಚ್–2016ರೊಳಗಾಗಿ ಪೂರ್ಣಗೊಳಿಸಲಾಗುವುದು.

2014–15ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ರಾಜ್ಯ ಪರಿಷತ್ತಿನಿಂದ ಅನುಮೋದನೆ ದೊರೆಯದ ಕಾರಣ ಈ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

6. ವಿಷಯ: ಪಾವಗಡ, ಚಳ್ಳಕೆರೆ, ಮೊಣಕಾಲ್ಮೂರು, ಸಂಡೂರು, ಹೊಸಪೇಟೆ, ಕೂಡ್ಲಿಗಿ ತಾಲ್ಲೂಕುಗಳ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯಡಿ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ.

ಶ್ರೀ ಕೆ. ಎಂ. ತಿಮ್ಮರಾಯಪ್ಪ: ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿಲ್ಲ.

ಅಧ್ಯಕ್ಷರು: ಉತ್ತರ ಕಳುಹಿಸಿ ಕೊಡಿ.

ಶ್ರೀ ಹೆಚ್. ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಪಾವಗಡ ತಾಲ್ಲೂಕಿನ 369 ಸಂಖ್ಯೆ ಜನವಸತಿಗಳಿಗೆ ಹಾಗೂ ಚಿತ್ರದುರ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳಿಗೆ 503 ಸಂಖ್ಯೆ ಜನವಸತಿಗಳಿಗೆ ತುಂಗಭದ್ರಾ ಜಲಾಶಯದಿಂದ ನೀರು ಪೂರೈಸಲು ಕರಡು ಯೋಜನೆಯನ್ನು

ರೂಪಿಸಲಾಗಿದೆ. ಈ ಯೋಜನೆಯಡಿಯಲ್ಲಿ intake Well, ಕಚ್ಚಾ ನೀರು ಏರು ಕೊಳವೆ ಮಾರ್ಗ, ಶುದ್ಧ ಕುಡಿಯುವ ನೀರಿನ ಸ್ಥಾವರಗಳು ಹಾಗೂ 28 ಎಂ.ಬಿ.ಆರ್.ಗಳನ್ನು ಯೋಜನಾ ವರದಿಯಲ್ಲಿ ಅಳವಡಿಸಲಾಗಿದೆ.

ಇದಲ್ಲದೇ ಬಳ್ಳಾರಿ ಜಿಲ್ಲೆಗೆ ಸೇರಿರುವ ಕೂಡ್ಲಿಗಿ, ಹೊಸಪೇಟೆ ಹಾಗೂ ಸಂಡೂರು ತಾಲ್ಲೂಕುಗಳಿಗೆ intake well ಕಚ್ಚಾ ನೀರು ಏರು ಕೊಳವೆ ಮಾರ್ಗ ಮತ್ತು ಶುದ್ಧ ಕುಡಿಯುವ ನೀರಿನ ಸ್ಥಾವರಗಳನ್ನು ಯೋಜನಾ ವರದಿಯಲ್ಲಿ ಅಳವಡಿಸಿ ಯೋಜನೆಯನ್ನು ರೂಪಿಸಲಾಗಿದೆ.

ಮೇಲ್ಕಂಡ 2 ಅಂಶಗಳನ್ನೊಳಗೊಂಡ ಯೋಜನೆಯ ಪಿ.ಎಸ್.ಆರ್ ನ್ನು ಈಗಾಗಲೇ ತಯಾರಿಸಿ ದಿನಾಂಕ: 16.06.2014ರಂದು ನಡೆದ ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಮಿತಿ ಸಭೆಯಲ್ಲಿ (ಎಸ್.ಎಲ್. ಎಸ್.ಎಸ್.ಸಿ) ರೂ. 1703.69 ಕೋಟಿ ಮೊತ್ತಕ್ಕೆ ಅನುಮೋದನೆ ಪಡೆಯಲಾಗಿದೆ.

ಸದರಿ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಮಂಡಿಸಿ, ಅನುಮೋದನೆ ಪಡೆಯಲು ಆರ್ಥಿಕ ಇಲಾಖೆಯ ಸಹಮತಿಗಾಗಿ ಕಡತವನ್ನು ಮಂಡಿಸಲಾಗಿದ್ದು, ಈ ಕಡತದಲ್ಲಿ ಆರ್ಥಿಕ ಇಲಾಖೆಯು ಕೆಲವಾರು ಅಂಶಗಳನ್ನು ಗಮನಿಸಿ ಅವುಗಳ ಕುರಿತು ಸೂಕ್ತ ಪರಿಶೀಲನೆ ನಡೆಸಿ ಮರುಸಲ್ಲಿಸಲು ಅಭಿಪ್ರಾಯ ತಿಳಿಸಿರುತ್ತಾರೆ.

ಆರ್ಥಿಕ ಇಲಾಖೆಯ ಅಭಿಪ್ರಾಯ/ಗಮನಿಸಿರುವ ಅಂಶಗಳ ಕುರಿತು ಪರಿಶೀಲಿಸಲಾಗುತ್ತಿದೆ. ಸದರಿ ಯೋಜನೆಯ ಆರ್ಥಿಕ ಹಾಗೂ ತಾಂತ್ರಿಕ ವಿಶ್ಲೇಷಣೆಯ ನಂತರ ಮುಂದಿನ ಕ್ರಮವಹಿಸಲಾಗುವುದು.

(ಗೊಂದಲ)

ಅಧ್ಯಕ್ಷರು: ಶ್ರೀ ಹೆಚ್. ಡಿ. ರೇವಣ್ಣನವರು ಹಾಗೂ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ಕೇಳಿ, ಅವರು ಇಲ್ಲ. ಡಾ: ಸಿ. ಎನ್. ಅಶ್ವಥ್ ನಾರಾಯಣ ಕೇಳಿ, ಅವರು ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದೆಂಥ ಸರ್ಕಾರ; ಇದು ಕಮಿಷನ್ ಸರ್ಕಾರ.

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಅರ್ಧ ಗಂಟೆ ಮುಂದೂಡಿದ್ದೇನೆ.

(ಸದನದ ಕಲಾಪವು ಬೆಳಿಗ್ಗೆ 10.47 ಗಂಟೆಗೆ ಮುಂದೂಡಲ್ಪಟ್ಟಿತು. ಸನದವು ಪುನಃ ಅರ್ಧ ಗಂಟೆಯ ನಂತರ ಸೇರಲು ನಿಶ್ಚಯಿಸಿತು)

(ಸನದವು ಪುನಃ 01 ಗಂಟೆ 21 ನಿಮಿಷಕ್ಕೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಘೋಷಣೆಗಳನ್ನು ಕೂಗುತ್ತಿದ್ದರು)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನೀವು ನಗುತ್ತಿರುವುದನ್ನು ನೋಡಿದರೆ ಏನೋ ರಾಜೀನಾಮೆ ಕೊಡುತ್ತಾರೆಂದು ನಮಗೆ ಅನಿಸುತ್ತಿದೆ.

(ಗೊಂದಲ)

11. ಪ್ರಕಟಣೆ

ಅಧ್ಯಕ್ಷರು: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118 ರ ಮೇರೆಗೆ 2015ನೇ ಸಾಲಿನ ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ: 27.11.2015ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನ ವಿನಿಯೋಗ (ಸಂಖ್ಯೆ: 5) ವಿಧೇಯಕ, 2015
2. ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ, 2015